


■ ಸವಿತಾ ಶ್ರೀನಿವಾಸ
ಕಲೆ: ಮೋನಪ್ಪ ಎಚ್.ಎಸ್.

# ಸಂಘರ್ಷದ ನಡುವೆ ಮಿಡಿದ ಶ್ರುತಿ

ಅಂತೂ ಕಡೆಗೆ ಕೆಲವು ಅವಶೇಷಗಳಡಿ ಮಿಸುಕಾಟ ಕಾಣಿಸಿ, ಆ ವ್ಯಕ್ತಿಯ ರಕ್ಷಣೆಯ ಕಾರ್ಯಕ್ಕೆ ಸಜ್ಜಾದರು. ಓರ್ವ ಹೆಂಗಸು ಕಾಣಿಸಿದಾಗ ಇಬ್ಬನಿ ಹಾಗೂ ಇತರ ಮಹಿಳಾ ವಾರ್ಡನ್‌ಗಳ ನೆರವಿನಿಂದ ತೀವ್ರ ಆಘಾತ ಹಾಗೂ ಗಾಯಗೊಂಡಿದ್ದ ಅವರನ್ನು ಹೊರಗೆಳೆದಿದ್ದರು. ಆ ಕೂಡಲೇ ಅವರನ್ನು ತುರ್ತು ಚಿಕಿತ್ಸಾ ಘಟಕಕ್ಕೆ ಸಾಗಿಸಲಾಗಿತ್ತು.

ಪಕ್ಕದಲ್ಲೇ ಮೃತಪಟ್ಟಿದ್ದ ತನ್ನ ಆರು ವರ್ಷದ ಮಗುವನ್ನು ನೋಡಿ ಆ ಹೆಣ್ಣಿನ ರೋದನ ಮುಗಿಲು ಮುಟ್ಟಿತ್ತು.

ತಮ್ಮ ಕೆಲಸವೇ ಇಂಥದ್ದು. ಅತಿ ದುಃಖದ ಪರಿಸ್ಥಿತಿಯಲ್ಲೂ ಸ್ಥಿಮಿತ ಕಳೆದುಕೊಳ್ಳುವಂತಿಲ್ಲ. ಅಪಘಾತ, ಜೀವನ್ಮರಣದ ನಡುವೆ ಸೆಣಸಾಡುವವರಿಗೆ ಸಹಾಯಹಸ್ತ ಚಾಚುವುದು ಪುಣ್ಯದ ಕೆಲಸವೇ.

ಇಡೀ ನಿರ್ಮಾಣದ ನೆಟ್‌ವರ್ಕಿಂಗ್ ಉಳ್ಳ ಪ್ರಮುಖ ಕೋಣೆಯನ್ನು ಅವರು ತಲುಪಿದಾಗ ಎಲ್ಲರಿಗೂ ಆಶ್ಚರ್ಯ ಕಾದಿತ್ತು. ಅಂತಸ್ತುಗಳ ಮೂಲ ನರನಾಡಿ ಇರುವುದು ಈ ನೆಟ್‌ವರ್ಕಿಂಗ್ ಕೋಣೆಯಲ್ಲಾದರೂ ಅವುಗಳ ನಿರ್ಮಾಣದ 'ಸ್ಟೆಬಿಲಿಟಿ'ಯಲ್ಲೇನೂ ಸಮಸ್ಯೆ ಇಲ್ಲ ಎಂದು ಮುಖ್ಯ ಎಂಜಿನಿಯರ್ ಎಲ್ಲಾ ವೈರಿಂಗ್ ವ್ಯವಸ್ಥೆ ಹಾಗೂ ಕಂಪ್ಯೂಟರ್‌ನಲ್ಲಿ ತೋರಿಸಲಾದ ಅಂಕಿಅಂಶಗಳನ್ನು ಪರಿಶೀಲಿಸಿ ನುಡಿದಿದ್ದರು.

'ಹಾಗಾದರೆ ಈ ಕುಸಿತಕ್ಕೆ ಬೇರೆ ಕಾರಣಗಳಿರಬಹುದೇ?' ಎಂದು ವಿಪತ್ತು ನಿರ್ವಹಣಾ ಅಧಿಕಾರಿ ಪ್ರಶ್ನಿಸಿದ್ದರು.

'ಸುರಂಗ ಹಾದುಹೋಗಲು ಹಲವಾರು ಅಂತಸ್ತುಗಳನ್ನು ಕೆಳಗಡೆ ನಿರ್ಮಿಸಲಾಗಿದ್ದು ಮೆಟ್ರೋ ಹೋಗಬೇಕಾದ ತಾಣಕ್ಕೆ ಅನುಗುಣವಾಗಿ ಸುರಂಗ ಹಾಗೂ ಅದರೊಳಗಿನ ಗಾಲಿಗಳು ತಿರುಗಬೇಕಿರುತ್ತದೆ. ಹೀಗಾಗಿ ಒಂದೊಂದು ಅಂತಸ್ತಿನ ಸುರಂಗಗಳು ಹಲವಾರು ದಿಕ್ಕುಗಳಿಗೆ ಈ ನೋಡಲ್ ನಿಲ್ದಾಣದಲ್ಲಿ ತಿರುಗಬೇಕಿರುತ್ತದೆ'.

'ಇದನ್ನು ನಿಯಂತ್ರಿಸುವ ಉಪಕರಣವಿರುವುದೆಲ್ಲಿ ಸರ್?' ಹನ್ನಾಗೆ ಕುತೂಹಲ ತಡೆಯಲಿಕ್ಕಾಗದೆ ಕೇಳಿದ್ದಳು.

ಮುಖ್ಯ ಎಂಜಿನಿಯರ್ ಮುಖದಲ್ಲಿ ಯಾಕೋ ಬೆವರಿಳಿಯತೊಡಗಿತ್ತು. ಆ ಕೋಣೆಯ ಪಕ್ಕದ ಚೇಂಬರ್‌ಗೆ ಹೋಗಿ ಶೀತಲ ವಾತಾವರಣದಲ್ಲಿ ಸುಸ್ಥಿತಿಯಲ್ಲಿರಿಸಿದ್ದ ಸರ್ವರ್‌ಗಳನ್ನು ಪರಿಶೀಲಿಸಿದಾಗ ಇನ್ನು ಸತ್ಯವನ್ನು ಮುಚ್ಚಿಡುವುದರಲ್ಲಿ ಯಾವುದೇ ಅರ್ಥವಿಲ್ಲವೆನಿಸಿತ್ತು. ಸುರಂಗಗಳ ಮೂಲಕ ಹಾದುಹೋಗಬೇಕಾದ ಮೆಟ್ರೋಗಳ ಪಟ್ಟಿ ಹಾಗೂ ತಾಣಗಳ ಚಾರ್ಟ್ ದಿನವೂ ಅವರ ಮುಂದಿರುತ್ತಿದ್ದು, ಅದನ್ನು ನಿರ್ವಹಿಸುತ್ತಿದ್ದ ಎಂಜಿನಿಯರ್ ರಾತ್ರಿ ಅಸ್ವಸ್ಥನಾಗಿ ಮಧ್ಯದಲ್ಲೇ ಹೊರಟುಬಿಟ್ಟಿದ್ದು ಇದೆಲ್ಲ ರಾದ್ಧಾಂತಕ್ಕೆ ಕಾರಣವಾಗಿತ್ತು! ಆತನಿಗೆ ಪರ್ಯಾಯವಾಗಿ ಬರಬೇಕಿದ್ದ ವ್ಯಕ್ತಿ ಸಹ ಗೈರುಹಾಜರಾಗಿದ್ದ!

ಮನುಷ್ಯನ ಸಹಜ ತಪ್ಪುಗಳನ್ನು ಯಂತ್ರಗಳ ಮೇಲೆ ಹೊರಿಸಿ ತಾಂತ್ರಿಕ ದೋಷವೆಂಬ ನೆಪ ಒಡ್ಡಿ ನುಣುಚಿಕೊಳ್ಳುವುದು ಬಲು ಸುಲಭ. ಆದರೆ ಮಾನವನ ಕೆಲಸವನ್ನು